ಮಂಡ್ಯ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಮಂಡ್ಯ – 571 401
MANDYA INSTITUTE OF MEDICAL SCIENCES
MANDYA -571 401
(Autonomous Medical Institution, Government of Karnataka)

Phone & Fax : 08232-231001
Director : 08232-222086
CAO : 08232-231197
FA : 08232-401198

ಮಂಡ್ಯ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಮಂಡ್ಯ ಇಲ್ಲಿಗೆ ಔಷಧಗಳ ಖರೀದಿಗಾಗಿ ಕರೆದಿರುವ ಅಲ್ಪಾವಧಿ ಟೆಂಡರ್‌ನಲ್ಲಿ ನಮೂದಾಗಿರುವ ದರಗಳನ್ನು ಟೆಂಡರ್‌ದಾರರ ಜೊತೆ ಮಾತುಕತೆ ಮೂಲಕ ದರವನ್ನು ನಿಗಧಿಪಡಿಸಲು ದಿನಾಂಕ.24.09.2012 ರಂದು ಮದ್ಯಾಹ್ನ 3 ಗಂಟೆಗೆ ಮಾನ್ಯ ನಿರ್ದೇಶಕರು, ಹಾಗೂ ಟೆಂಡರ್ ಸಮಿತಿಯ ಅದ್ಯಕ್ಷರು, ಮತ್ತು ಟೆಂಡರ್ ಸಮಿತಿಯ ಸದಸ್ಯರು ಹಾಗೂ ವಿಭಾಗದ ಮುಖ್ಯಸ್ಥರು ಭಾಗವಹಿಸಿ ಮಾನ್ಯ ನಿರ್ದೇಶಕರ ಕೊಠಡಿಯಲ್ಲಿ ಚರ್ಚಿಸಿ ನಿರ್ಣಯಿಸಿದ ಸಭಾ ನಡಾವಳಿಗಳು.

**ಟೆಂಡರ್ ಸಮಿತಿ ಸಭೆಯಲ್ಲಿ ಹಾಜರಿದ್ದ ಟೆಂಡರ್ ಸಮಿತಿ ಸದಸ್ಯರ ವಿವರಗಳು.**

1. ಡಾ|| ದೇವಾನಂದ್,
   ನಿರ್ದೇಶಕರು, ಹಾಗೂ ಟೆಂಡರ್ ಸಮಿತಿ ಅದ್ಯಕ್ಷರು,
   ಮಿಮ್ಸ್,ಮಂಡ್ಯ.
2. ಶ್ರೀ ಆಂಜನಪ್ಪ,
   ಆರ್ಥಿಕ ಸಲಹೆಗಾರರು, ಹಾಗೂ ಟೆಂಡರ್ ಸಮಿತಿ ಸದಸ್ಯರು,
   ಮಿಮ್ಸ್, ಮಂಡ್ಯ
3. ಶ್ರೀಮತಿ ಮಾರ್ಗರೇಟ್ ರೋಸ್,
   ಪ್ರಭಾರ ಮುಖ್ಯ ಆಡಳಿತಾಧಿಕಾರಿಗಳು, ಹಾಗೂ ಟೆಂಡರ್ ಸಮಿತಿ ಸದಸ್ಯರು,
   ಮಿಮ್ಸ್, ಮಂಡ್ಯ
4. ಡಾ|| ಕೆ.ಎಂ ಶಿವಕುಮಾರ್,
   ವೈದ್ಯಕೀಯ ಅಧೀಕ್ಷಕರು, ಹಾಗೂ ಟೆಂಡರ್ ಸಮಿತಿ ಸದಸ್ಯರು,
   ಮಿಮ್ಸ್, ಮಂಡ್ಯ
5. ಡಾ|| ಪುಟ್ಟಸ್ವಾಮಿ,
   ಸ್ಥಾನೀಯ ವೈದ್ಯಾಧಿಕಾರಿಗಳು, ಬೋಧಕ ಆಸ್ಪತ್ರೆ, ಮಿಮ್ಸ್
   ಹಾಗೂ ಟೆಂಡರ್ ಸಮಿತಿ ಸದಸ್ಯರು, ಮಿಮ್ಸ್, ಮಂಡ್ಯ.

ಮೇಲ್ಕಂಡ ಟೆಂಡರ್ ಸಮಿತಿಯ ಸದಸ್ಯರಲ್ಲದೆ ಈ ಕೆಳಕಂಡ ಸರಬರಾಜು ಸಂಸ್ಥೆಯ ಪ್ರತಿನಿಧಿಗಳು ಹಾಜರಿದ್ದರು.

1. M/s Maruthi Pharma, Bangalore.
2. M/s Max Pharma, Bangalore
3. M/s Mythri Associates, Mandya
4. M/s Rahul Pharma, Bangalore.
5. M/s Vinay Associates, Mysore
6. M/s Sri Krishna Drugs, Mandya
7. M/s Meditrade, Pharmaceutical Distributors, Bangalore
8. M/s R.S. Enterprises, Mysore

ಕ್ರಮಸಂಖ್ಯೆ. 2ರ ಸಂಸ್ಥೆಯವರು ಈಗಾಗಲೇ ಟೆಂಡರ್‌ನಲ್ಲಿ ಕಡಿಮೆ ದರವನ್ನು ನಮೂದಿಸಿರುವ ದರಗಳು ಕಡಿಮೆ ದರಗಳಾಗಿದ್ದು, ಮಾತುಕತೆಗೆ ಒಪ್ಪುವುದಿಲ್ಲವೆಂದು ತಿಳಿಸಿ ಫ್ಯಾಕ್ಸ್, ಮೂಲಕ ಪತ್ರ ರವಾನಿಸಿರುತ್ತಾರೆ.

ಕ್ರಮ ಸಂಖ್ಯೆ. 4ರ ಸಂಸ್ಥೆಯವರು ಮಾತುಕತೆಯ ಸಮಯದಲ್ಲಿ ಭಾಗವಹಿಸಿರಲಿಲ್ಲ. ಸಭೆಯಲ್ಲಿ ತೀರ್ಮಾನವಾಗುವ ನಿರ್ಣಯಗಳನ್ನು ಒಪ್ಪಿಕೊಳ್ಳುವುದಾಗಿ ಸಭೆ ಸೇರುವ ಮುಂಚಿತವಾಗಿ ನಿರ್ದೇಶಕರಿಗೆ ಮೌಖಿಕವಾಗಿ ತಿಳಿಸಿರುತ್ತಾರೆ.

ಮಿಮ್ಸ್ ನಿರ್ದೇಶಕರು, ಟೆಂಡರ್ ಸಮಿತಿ ಸದಸ್ಯರನ್ನು ಮತ್ತು ವಿವಿಧ ಕಂಪನಿಗಳ ಟೆಂಡರ್ ಪ್ರತಿನಿಧಿಗಳನ್ನು ಸ್ವಾಗತಿಸಿದರು.

ನಿರ್ದೇಶಕರು ಟೆಂಡರ್ ಪ್ರತಿನಿಧಿಗಳನ್ನು ಉದ್ದೇಶಿಸಿ ಮಾತನಾಡುತ್ತಾ ಪ್ರತಿಯೊಬ್ಬ ಟೆಂಡರ್‌ದಾರರು L-1 ರಂತೆ ಆಯ್ಕೆಯಾಗಿರುವ ಐಟಂಗಳ ಮೇಲೆ ಶೇಖಡವಾರು ಎಷ್ಟು ರಿಯಾಯಿತಿ ನೀಡಬಹುದು ಎಂಬುದನ್ನು ತಿಳಿಸಲು ಕೋರಿದರು. ಆದರೆ ಹಾಜರಿದ್ದ ಟೆಂಡರ್‌ದಾರರು ಡೀಸೆಲ್ ದರ ಏರಿಕೆಯಾಗಿರುವುದರಿಂದ ಸಾಗಾಣಿಕೆ ವೆಚ್ಚ ಜಾಸ್ತಿಯಾಗುವುದರಿಂದ ಈಗ ನಮೂದಿಸಿರುವ ದರಗಳನ್ನು ಕಡಿಮೆ ಮಾಡಲು ಸಾದ್ಯವಿಲ್ಲವೆಂಬುದನ್ನು ತಿಳಿಯ ಪಡಿಸಿದರು. ಹಾಗೂ ಇನ್ನು ಮುಂದೆ ಔಷಧಿಯ ದರಗಳು ಹೆಚ್ಚಾಗುವ ಸಂಬವವಿದ್ದು, ಈಗಿನ ದರಗಳಲ್ಲಿ ಸರಬರಾಜು ಮಾಡುವುದೇ ಕಷ್ಟಕರವಾಗಬಹುದೆಂದು ತಿಳಿಯಪಡಿಸಿದರು.

ತದನಂತರ ನಿರ್ದೇಶಕರು, ಶೇಖಡ 5% ರಂತೆ ರಿಯಾಯಿತಿ ನೀಡುವಂತೆ ಟೆಂಡರ್‌ದಾರರನ್ನು ಕೋರಿದರು. ರಿಯಾಯಿತಿಯನ್ನು ನೀಡಲು ಯಾರು ಸಹ ಸಮ್ಮತಿಸಲಿಲ್ಲ, ಅಂತಿಮವಾಗಿ ನಿರ್ದೇಶಕರೇ ಶೇಖಡ 2% ರಷ್ಟು ದರಗಳನ್ನು ರಿಯಾಯಿತಿ ನೀಡಬೇಕೆಂದು ಸೂಚಿಸಿದರು. ನಿರ್ದೇಶಕರ ಸೂಚನೆಯಂತೆ ಶೇಖಡ 2% ರಷ್ಟು ರಿಯಾಯಿತಿ ನೀಡಲು ಅಂತಿಮವಾಗಿ ಟೆಂಡರ್‌ದಾರರು ಒಪಿಗೆ ಸೂಚಿಸಿದರು. ಆದರೆ ಮೆ॥ ಮೈತ್ರಿ ಅಸೋಸಿಯೇಟ್ಸ್, ಮಂಡ್ಯ ರವರು ಮನವಿ ಸಲ್ಲಿಸಿ ಶೇಖಡ 2 ರಷ್ಟು ರಿಯಾಯಿತಿ ನೀಡಲು ಸಾದ್ಯವಿಲ್ಲವೆಂದು ತಿಳಿಸಿದರು. ಅದರ ಬದಲಾಗಿ 1000 ಸಂಖ್ಯೆಯ ಡಿ.ಎನ್.ಎಸ್ ಬಾಟಲ್‌ಗಳನ್ನು ಉಚಿತವಾಗಿ ಹೆಚ್ಚುವರಿಯಾಗಿ ನೀಡಲು ಒಪ್ಪಿಗೆ ಸೂಚಿಸಿದರು.

ಮುಂದುವರೆದಂತೆ, ದರಗಳ ಬಗ್ಗೆ ಚರ್ಚಿಸುತ್ತಾ ಟೆಂಡರ್‌ನಲ್ಲಿ ನಮೂದಿಸಿರುವ ದರಗಳು, ಈ ಸಾಲಿನಲ್ಲಿ ಬೇರೆ ಸಂಸ್ಥೆಗೆ ನೀಡಿರುವ ದರಗಳಿಗಿಂತ ಹೆಚ್ಚು ಎಂದು ಕಂಡುಬಂದಲ್ಲಿ ವ್ಯತ್ಯಾಸದ ಮೊತ್ತವನ್ನು ವಸೂಲಿ ಮಾಡುವುದಾಗಿ ನಿರ್ದೇಶಕರು ತಿಳಿಯಪಡಿಸಿದಿದ್ದುದಕ್ಕೆ ಟೆಂಡರ್‌ದಾರರು ಸಮ್ಮತಿಸಿದರು.

ಸರಬರಾಜಿಗೆ ಸಂಬಂಧಿಸಿದಂತೆ ಆದೇಶ ನೀಡಿದ 30 ದಿನಗಳೊಳಗಾಗಿ ಔಷಧಗಳನ್ನು ಸ್ಪೆಷಿಫಿಕೇಷನ್ ರೀತ್ಯಾ ಸರಬರಾಜು ಮಾಡುವಂತೆ ಟೆಂಡರ್‌ದಾರರಿಗೆ ಸೂಚಿಸಿದರು. ಅದರಂತೆ ಸರಬರಾಜುದಾರರು ಒಪ್ಪಿಗೆ ಸೂಚಿಸಿದರು.

ಪ್ರಸ್ತುತ ಟೆಂಡರ್‌ನಲ್ಲಿ L-1 ದರವು ದರಗುತ್ತಿಗೆಯ ದರಕ್ಕಿಂತ ಜಾಸ್ತಿಯಿದ್ದರೆ ಪರಿಶೀಲಿಸಿ ಸಂಬಂದಿಸಿದ ವಿಭಾಗ ಮುಖ್ಯಸ್ಥರ ಜೊತೆ ಚರ್ಚಿಸಿ ಅಂತಹ ಔಷಧಗಳನ್ನು ದರಗುತ್ತಿಗೆಯಲ್ಲಿಯೇ ಸರಬರಾಜು ಪಡೆದುಕೊಳ್ಳಲು ಸಮಿತಿಯು ತೀರ್ಮಾನಿಸಿತು.

ಸಾರ್ವಜನಿಕ ರೋಗಿಗಳ ಹಿತ ದೃಷ್ಟಿಯಿಂದ ಹಾಗೂ ತುರ್ತು ಅವಶ್ಯಕತೆಯಿರುವುದರಿಂದ ಟೆಂಡರ್‌ನಲ್ಲಿ ಕಡಿಮೆ ದರ ನಮೂದಿಸಿರುವ ಸಂಸ್ಥೆಗಳಿಗೆ ಸರಬರಾಜು ಆದೇಶ ನೀಡಲು ಸಭೆಯು ಸರ್ವಾನುಮತದಿಂದ ತೀರ್ಮಾನಿಸಿತು.

ಟೆಂಡರ್‌ದಾರರು ಬಿಡ್‌ನಲ್ಲಿ ಭಾಗವಹಿಸಿದ ದರಕ್ಕೆ ಇಎಂಡಿ ಮೊತ್ತವನ್ನು ನೀಡಿದ್ದು, ಟೆಂಡರ್‌ದಾರರ ಕೋರಿಕೆಯ ಮೇರೆಗೆ, ಟೆಂಡರ್ ಪ್ರಕ್ರಿಯೆಯಲ್ಲಿ L-1 ಆದ ಮೊತ್ತಕ್ಕೆ ಸರಿಹೊಂದುವ ಇಎಂಡಿಯನ್ನು ಪಡೆದು ಉಳಿದ ಇಎಂಡಿ ಮೊತ್ತವನ್ನು ಟೆಂಡರ್‌ದಾರರಿಗೆ ವಾಪಸ್ಸು ಮಾಡಲು ಸಮಿತಿಯು ತೀರ್ಮಾನಿಸಿತು.

ಆರ್ಥಿಕ ಸಲಹೆಗಾರರು
ಮಿಮ್ಸ್, ಮಂಡ್ಯ

ವೈದ್ಯಕೀಯ ಅಧೀಕ್ಷಕರು
ಮಿಮ್ಸ್, ಮಂಡ್ಯ

ಸ್ಥಾನಿಯ ವೈದ್ಯಾಧಿಕಾರಿಗಳು
ಮಿಮ್ಸ್, ಮಂಡ್ಯ

ಚೀಫ್ ಫಾರ್ಮಸಿಸ್ಟ್
ಮಿಮ್ಸ್, ಮಂಡ್ಯ

ಮುಖ್ಯ ಆಡಳಿತಾಧಿಕಾರಿಗಳು
ಮಿಮ್ಸ್, ಮಂಡ್ಯ.

ನಿರ್ದೇಶಕರು,
ಮಿಮ್ಸ್, ಮಂಡ್ಯ